

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

**ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರು**

2024ರ ಫೆಬ್ರುವರಿಯಲ್ಲಿ ಒಟ್ಟು ಪ್ರಯಾಣಿಕರು **30.46** ಲಕ್ಷ
ಶೇ. **6.3**ರಷ್ಟು ಏರಿಕೆ.
ಅಂತರರಾಷ್ಟ್ರೀಯ ಪ್ರಯಾಣ **3.78** ಲಕ್ಷ
ಶೇ. **16.4** ಏರಿಕೆ.
ದೇಶದೊಳಗೆ ಪ್ರಯಾಣ **26.67** ಲಕ್ಷ
ಶೇ. **5**ರಷ್ಟು ಏರಿಕೆ.

ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿದೆ.

## ಹೊಸ ಶಕೆಯ ಆರಂಭ

ಭಾರತದೊಳಗೆ ವಿಮಾನಯಾನ ಆರಂಭಗೊಂಡು ಎಂಟು ದಶಕಗಳು ಕಳೆದಿವೆ. ಈ ದೇಶೀ ವಿಮಾನಯಾನ ಕ್ಷೇತ್ರದಲ್ಲಿ ಸಂಚಲನ ಉಂಟು ಮಾಡಿದ್ದು 'ಡೆಕ್ಕನ್ ಏರ್‌ವೇಸ್'. 2003ರಲ್ಲಿ ಆರಂಭಗೊಂಡ 'ಡೆಕ್ಕನ್ ಏರ್‌ವೇಸ್', ಅಗ್ಗದ ಬೆಲೆಗೆ ವಿಮಾನಯಾನ ಘೋಷಣೆಯ ಮೂಲಕ ಹೊಸ ಆಂದೋಲನವನ್ನೇ ಶುರು ಮಾಡಿತು. ಇದರ ಫಲವಾಗಿ, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರೂ ವಿಮಾನಯಾನವೇನೂ ಗಗನ ಕುಸುಮವಲ್ಲ ಎಂದು ಭಾವಿಸಲು ಆರಂಭಿಸಿದರು.

ಐಟಿ, ಬಿಟಿ ಕ್ಷೇತ್ರಗಳಲ್ಲಿನ ಸ್ಫೋಟಕ ಬೆಳವಣಿಗೆಯಿಂದಾಗಿ ವಿಮಾನದಲ್ಲಿ ಓಡಾಡುವವರ ಸಂಖ್ಯೆಯೂ ದೊಡ್ಡದಾಯಿತು. ದುಡಿಯುವ ಕೈಗಳು ಹೆಚ್ಚಾದಂತೆ ಪ್ರಯಾಣಕ್ಕೆ ರೈಲು ನೆಚ್ಚಿಕೊಂಡಿದ್ದವರು, ತ್ವರಿತವಾಗಿ ತಲುಪಲು ವಿಮಾನಯಾನ ಆರಿಸಿಕೊಂಡರು. ವಿಮಾನಯಾನದತ್ತ ಜನರ ಆಸಕ್ತಿ ಹೆಚ್ಚಾಗಿರುವುದರಿಂದ ಮತ್ತು ಉದ್ಯಮದ ಹಿತದೃಷ್ಟಿಯ ಪರಿಣಾಮವಾಗಿಯೇ ರಾಜ್ಯ ಸರ್ಕಾರವು ಹೆಲಿಪೋರ್ಟ್ ಹಾಗೂ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಮುಂದಾಗಿದೆ.

ದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹಾಗೂ ಭೌಗೋಳಿಕ ಪ್ರದೇಶ ಹೊಂದಿರುವ ಆರನೇ ರಾಜ್ಯ ಕರ್ನಾಟಕವಾಗಿದೆ. ಕರ್ನಾಟಕದ ಪಶ್ಚಿಮದಲ್ಲಿ ಲಕ್ಷದ್ವೀಪ ಸಮುದ್ರ, ಉತ್ತರದಲ್ಲಿ ಗೋವಾ ಹಾಗೂ ಮಹಾರಾಷ್ಟ್ರ, ದಕ್ಷಿಣದಲ್ಲಿ ಕೇರಳ ರಾಜ್ಯಗಳಿವೆ. ರಾಜ್ಯದ ಜನಸಂಖ್ಯೆ ಸುಮಾರು 6.9 ಕೋಟಿ. ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆಯೂ ದೊಡ್ಡದಿದೆ. ಈ ಬೇಡಿಕೆಗೆ ಅನುಗುಣವಾಗಿ ರಾಜ್ಯ ಸರ್ಕಾರ ಕಿರು ವಿಮಾನ ನಿಲ್ದಾಣ ಹಾಗೂ ಹೆಲಿಪೋರ್ಟ್‌ಗಳ ನಿರ್ಮಾಣಕ್ಕೆ ಮುಂದಾಗಿದೆ. ಕಳೆದ ಬಜೆಟ್‌ನಲ್ಲಿ ಚಿಕ್ಕಮಗಳೂರು, ಧರ್ಮಸ್ಥಳ, ಹಂಪಿ ಹಾಗೂ ಕೊಡಗುಗಳಲ್ಲಿ ಸಣ್ಣ ವಿಮಾನ ನಿಲ್ದಾಣ ಆರಂಭಿಸುವ ಯೋಜನೆಯನ್ನು ಸರ್ಕಾರ ಪ್ರಕಟಿಸಿತ್ತು.

## 200 ವಿಮಾನ ನಿಲ್ದಾಣಗಳ ಗುರಿ

ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ ಮತ್ತು ಹಳೆಯ ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲು ಕೇಂದ್ರ ಸರ್ಕಾರ ₹1 ಲಕ್ಷ ಕೋಟಿ ಮೀಸಲಿಟ್ಟಿದೆ. ಆ ಮೂಲಕ ದೇಶೀಯ ವಿಮಾನ ನಿಲ್ದಾಣಗಳ ಸಂಖ್ಯೆಯನ್ನು 200ರ ಗಡಿ ದಾಟಿಸುವ ಗುರಿ ಸರ್ಕಾರದ್ದು ಎಂದು ಕೇಂದ್ರ ವಿಮಾನಯಾನ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಹೇಳಿದ್ದಾರೆ.

140 ಕೋಟಿ ಜನರಿರುವ ಭಾರತವು ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಕಾಣುತ್ತಿರುವ ರಾಷ್ಟ್ರ. 2030ರ ಹೊತ್ತಿಗೆ ದೇಶದೊಳಗೆ ಸಂಚರಿಸುವ ಪ್ರಯಾಣಿಕರ ಸಂಖ್ಯೆ 30 ಕೋಟಿ ಮೀರಲಿದೆ. ನಾವು ಸಾಮರ್ಥ್ಯ ಹೆಚ್ಚಿಸುವ ಕೆಲಸ ಮಾಡುತ್ತಿದ್ದೇವೆಯಷ್ಟೇ. ಇದ್ದ ತೊಡಕುಗಳನ್ನು ನಿವಾರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇರುವ ಕೆಲವೊಂದು ವಿಧಾನವನ್ನು ಸರಳೀಕರಿಸುತ್ತಿದ್ದೇವೆ. 2047ಕ್ಕೆ ಭಾರತ ಸ್ವಾತಂತ್ರ್ಯ ದೊರೆತು 100 ವರ್ಷಗಳು ಪೂರೈಸಲಿದೆ. ಆ ಹೊತ್ತಿಗೆ ನಾಗರಿಕ ವಿಮಾನಯಾನ ಕ್ಷೇತ್ರವು 4 ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ 20 ಟ್ರಿಲಿಯನ್‌ಗೆ ತಲುಪಬೇಕು. ಮುಂದಿನ ಒಂದು ದಶಕದಲ್ಲಿ ಸದ್ಯ ಇರುವ 713 ವಿಮಾನಗಳ ಸಂಖ್ಯೆಯಿಂದ 2 ಸಾವಿರಕ್ಕೆ ಹೆಚ್ಚಿಸುವುದು ನಮ್ಮ ಗುರಿ' ಎಂದು ಸ್ವತಃ ಸಚಿವ ಸಿಂಧಿಯಾ ಅಂದಾಜಿಸಿದ್ದಾರೆ.

ದೆಹಲಿ ವಿಮಾನ ನಿಲ್ದಾಣವೊಂದೇ 2025ರ



ಮೈಸೂರು ವಿಮಾನ ನಿಲ್ದಾಣ

**ಶಿವಮೊಗ್ಗ ವಿಮಾನ ನಿಲ್ದಾಣ**

2024ರ ಫೆಬ್ರುವರಿಯಲ್ಲಿ ಒಟ್ಟು ಪ್ರಯಾಣಿಕರು
**7,282**
ಜನವರಿಯಲ್ಲಿ
**6,430**